**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 384/2020**
**ಸಿಡಬ್ಲು ಃ 1**
**ಪಿಡಬ್ಲು ಃ 1**

**ಹೆಸರು** ಃ ಖಾಜಾಸಾಬ ಬಾಬುಸಾಬ ನಾಯಕವಾಡಿ
**ತಂದೆ ಹೆಸರು** ಃ ಬಾಬುಸಾಬ ನಾಯಕವಾಡಿ
**ವಯಾ** ಃ 38 ವರ್ಷ
**ಉದ್ಯೋಗ** ಃ ಕೆ ಎಸ್ ಆರ್ ಟಿ ಡ್ರೈವರ್
**ವಾಸ** ಃ ಹುಕ್ಕೇರಿ

**(ದಿನಾಂಕಃ 24-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ**

2019 ರ ಅಗಸ್ಟ ತಿಂಗಳಲ್ಲಿ ನಾನು ಹುಕ್ಕೇರಿಯಿಂದ ಚಿಕ್ಕೋಡಿಗೆ ಕೆ.ಎಸ್.ಆರ.ಟಿ ಬಸ್ ಚಾಲಕನಾಗಿ ಹೊಗುತ್ತಿದ್ದಾಗ, ಹುಕ್ಕೇರಿಯ ಉಮೇಶ ನಗರ ಹತ್ತಿರ ಒಂದು ಚಕ್ಕಡಿ ಗಾಡಿ ಬಸ್ ನ ಮುಂದೆ ಹೋಗುತ್ತಿತ್ತು ಆ ಸಮಯದಲ್ಲಿ ನಾನು ಆ ಚಕ್ಕಡಿಯನ್ನು ಓವರ ಟೇಕ ಮಾಡಲು ಇಂಡಿಕೇಟರ ಕೊಟ್ಟು ಬಸ್ ನ್ನು ಚಲಾಯಿಸುವಾಗ, ನನ್ನ ಅರ್ದ ಬಸ್ ಪಾಸ ಆಗಿದ್ದು ಆಗ ಆರೋಪಿಯು ಹಿಂದಿನಿಂದ ಬೈಕ ತೆಗೆದುಕೊಂಡು ನನ್ನ ಬಸ್ ನ್ನು ಓವರ ಟೇಕ ಮಾಡುತ್ತ, ರಸ್ತೆಯ ಬಲಬದಿಗೆ ಇಳಿದು ಮುಂದೆ ಹೋದ. ತದನಂತರ 2 ರಿಂದ 3 ಕಿ ಮೀ ಆರೋಪಿ ನನ್ನ ಬಸ್ ನ ಮುಂದೆ ಅಡ್ಡಾ ದಿಡ್ಡಿ ಓಡಿಸುತ್ತಾ, ನನಗೆ ಓವರ್ ಟೇಕ ಮಾಡಲು ಬಿಡಲಿಲ್ಲ. ಬಸ್ಸನಲ್ಲಿದ್ದಂತಹ ಪ್ರಯಾಣಿಕರು ನನಗೆ ಬಸ್ ನಿಲ್ಲಿಸಿ ಆತಿನಿಗೆ ಕೇಳೋಣ ಎಂದು ಹೇ ಳಿದರು. ಅಷ್ಟರಲ್ಲಿ ಕಣ್ಣಾ ಣವಾಡಿ ಎಂಬ ಊರು ಬಂದಿತು. ನಾನು ಪ್ರಯಾಣಿಕರನ್ನು ಇಳಿಸಲು ಬಸ್ಸನ್ನು ನಿಲ್ಲಿಸಿದೆ. ಆಗ ಪ್ರಯಾಣಿಕರು ಆರೋಪಿಗೆ ಕೇಳಲು ಹೋದಾಗ ಆರೋಪಿ ಗಾಡಿ ತೆಗೆದುಕೊಂಡು ಮುಂದೆ ಹೋದ. ನಾನು ಹಂಜ್ಯಾ ನಟ್ಟಿ ಗ್ರಾಮಕ್ಕೆ ಹೋದಾಗ, ನಾನು ಹೋಗುವ ಮುಂಚೆ ಆರೋಪಿಯು ರಸ್ತೆಗೆ ಅಡ್ಡವಾಗಿ ತನ್ನ ಬೈಕನ್ನು ನೀಲ್ಲಿಸಿದ್ದ . ಅದನ್ನು ನೋಡಿ ನಾನು ಬಸ್‌ನ ಹ್ಯಾಂಡ ಬ್ರೆಕ ಹಾಕಿದೆ. ಅಷ್ಟರಲ್ಲಿ ಆರೋಪಿ ಡ್ರೈವರ ಸೈಡನ ಡೋರ ನ್ನು ಓಪನ ಮಾಡಿ, ನನ್ನ ಕೊರಳ ಪಟ್ಟಿ ಹಿಡಿದು ನನ್ನನ್ನು ಕೆಳಗಡೆ ಜಗ್ಗಿದ. ಜಗ್ಗಿದ ರಭಸಕ್ಕೆ ನನ್ನ ಬಡಗಡೆ ಮೊಣಕಾಲಿನ

ಲಿಗಮೆಂಟ ಕಟ್ಟಾಯಿತು. ಆಗ ನಾನು ಕಾಲು ಮುರಿಯಿತು ಎಂದು ಚಿರಿದೆ. ಆಗ ಆರೋಪಿಯು ನನ್ನ ಬಲಗಾಲ ಹಿಡಿದು ತಿರುವಿದ. ಆರೊಪಿಯು ಮದ್ಯ ಕುಡಿದಿದ್ದ. ಆತ ನನ್ನ ಕಾಲನ್ನು ತಿರುಗಿಸಿ ಅದಕ್ಕೆ ತನ್ನ ಚಪ್ಪಲಿನಿಂದ ಹೊಡೆಯಲು ಶುರು ಮಾಡಿದ. ಆಗ ಎಲ್ಲ ಪ್ರಯಾಣಿಕರು ಬಸ ನಿಂದ ಕೆಳಗಡೆ ಇಳಿದು ಬಂದು ಜಗಳ ಬಿಡಿಸಿದರು. ಆರೊಪಿಯು ಅವಾಚ್ಯವಾಗಿ ಬೈಯುತ್ತಾ ಅಲ್ಲಿಂದ ಹೋದನು. ಆಗ ನಮ್ಮ ಕಂಡಕ್ಟರ ರಾಜೇಂದ್ರ ಮರಿನಾಯಕ ಇವರು ಪ್ರಯಾಣಿಕರನ್ನು ಬೇರೆ ಬಸ್ ಗೆ ಹತ್ತಿಸಿ ನನ್ನನ್ನು ಹುಕ್ಕೇರಿ ಸರಕಾರಿ ದಾವಾಖಾನೆಗೆ ಕರೆದುಕೊಂಡು ಹೋದರು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಬೆಳಗಾವಿ ಕೆ ಎಲ್ ಇ ದಾವಾಖಾನೆಗೆ ವೈದ್ಯರು ಕಳಿಸಿದರು. ಬಸ್ ನ್ನು ಪೊಲಿಸ ಠಾಣೆಗೆ ಕಂಡಕ್ಟರ ತೆಗೆದುಕೊಂಡು ಹೋದರು. ಪೊಲಿಸರು ಆರೊಪಿಯನ್ನು ಕರೆದುಕೋಂಡು ಪೊಲೀಸ ಠಾಣೆಗೆ ಕರೆದುಕೊಂಡು ಬಂದರು. ಅಲ್ಲಿ ಯಾರು ಇರಲಿಲ್ಲ. ಆ ಸಮಯದಲ್ಲಿ ಪೊಲಿಸರು ದೂರನ್ನು ಪಡೆದರೋಇಲ್ಲವೊ ನನಗೆ ಗೊತ್ತಾಗಲಿಲ್ಲ.

**ಮುಂದುವರೆದ ಮುಖ್ಯವಿಚಾರಣೆ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**